ಸಂಖ್ಯೆ: ಮಂ.ವಿ./ಪ.ವಿ./ಬಿ.ಎಡ್./ಸಿಆರ್.6/2014-15/ಇ.8 ದಿನಾಂಕ: 27.08.2014

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಪಾವತಿಸುವ ಸಂಭಾವನೆ/ ದಿನಭತ್ಯೆ/ಸ್ಥಳೀಯ ಭತ್ಯೆ ಮತ್ತು ಇತರ ವೆಚ್ಚಗಳ ಪರಿಷ್ಕರಣೆ ಬಗ್ಗೆ.

ಉಲ್ಲೇಖ:
1) ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ/ ಇತರ ವೆಚ್ಚಗಳ ಪಾವತಿಯ ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಮಂ.ವಿ./ಪ.ವಿ./ಬಿ.ಎಡ್./ಸಿಆರ್.29/2011-12/ಇ.8 ದಿನಾಂಕ: 23.07.2011
2) ಸಂಭಾವನೆ/ದಿನಭತ್ಯೆ/ಸ್ಥಳೀಯ ಭತ್ಯೆ/ ಇತರ ವೆಚ್ಚಗಳ ದರಪಟ್ಟಿಯ ನ್ಯೂನತೆಗಳನ್ನು ಸರಿಪಡಿಸುವ ಮತ್ತು ಭಾಗ:ಶ ದರಗಳನ್ನು ಪರಿಷ್ಕರಿಸುವ ಈ ಕಛೇರಿಯ ಸಮ ಸಂಖ್ಯೆಯ ಪ್ರಸ್ತಾವನೆ ದಿನಾಂಕ 16.05.2014
3) ಸಿಂಡಿಕೇಟ್ ನಿರ್ಣಯ ದಿನಾಂಕ 21.06.2014.
4) ಕುಲಸಚಿವರ ಪತ್ರ ಸಂಖ್ಯೆ: ಎಂ.ಯು./ವಿ.ಸಿ.ಸಿ./ಟಿಎಡಿಎ/ಪರೀಕ್ಷಾ ಸಂಭಾವನೆ/ 2014-15/ಎ8. ದಿನಾಂಕ 10.07.2014.
5) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 26.08.2014.

------

ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯದ ಘಟಕ/ಸಂಯೋಜಿತ ಕಾಲೇಜುಗಳ ಶಿಕ್ಷಕರು/ ಶಿಕ್ಷಕೇತರರು ಮತ್ತು ಬಾಹ್ಯ ಪರೀಕ್ಷಕರಿಗೆ ಉಲ್ಲೇಖ(1)ರ ಅಧಿಕೃತ ಜ್ಞಾಪನದ ಅವಕಾಶದಂತೆ ಪಾವತಿಸಲಾಗುತ್ತಿದ್ದ ಸಂಭಾವನೆ/ದಿನಭತ್ಯೆ/ಸ್ಥಳೀಯ ಭತ್ಯೆ/ಇತರ ವೆಚ್ಚಗಳ ದರಪಟ್ಟಿಯಲ್ಲಿದ್ದ ನ್ಯೂನತೆಗಳನ್ನು ದಿನಾಂಕ 21.06.2014ರ ಸಿಂಡಿಕೇಟ್ ನಿರ್ಣಯದಂತೆ ಸರಿಪಡಿಸಿ ಪ್ರಸ್ತುತ ಪಾವತಿಸಲಾಗುತ್ತಿರುವ ಸಂಭಾವನೆ/ದಿನಭತ್ಯೆ/ಸ್ಥಳೀಯ ಭತ್ಯೆ/ಇತರ ವೆಚ್ಚಗಳ ಕೆಲವೊಂದು ದರಗಳನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ದರಗಳು ಎಪ್ರಿಲ್/ಮೇ 2014ರಲ್ಲಿ ನಡೆಸಿದ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಕೇಂದ್ರಿಯ ಮೌಲ್ಯಮಾಪನದಲ್ಲಿ ಭಾಗವಹಿಸಿದ ಶಿಕ್ಷಕರಿಗೆ ಮಾತ್ರ ಪೂರ್ವಾನ್ವಯವಾಗುವಂತೆ ಸರಕಾರದಿಂದ ಏಕರೂಪದ ದರಪಟ್ಟಿಯು ಅನುಷ್ಠಾನಗೊಳ್ಳುವವರೆಗೆ ಚಾಲ್ತಿಯಲ್ಲಿರುವಂತೆ ಜಾರಿಗೊಳಿಸಲಾಗಿದೆ. ತಿದ್ದುಪಡಿ ಮತ್ತು ಪರಿಷ್ಕೃತ ದರಗಳನ್ನು ಕ್ರಮವಾಗಿ ಅನುಬಂಧ I ಮತ್ತು ಅನುಬಂಧ IIರಲ್ಲಿ ನೀಡಲಾಗಿದೆ.

ಕುಲಸಚಿವರು (ಪರೀಕ್ಷಾಂಗ)

ರಿಗೆ:
1) ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಭಾಗ/ಕೇಂದ್ರಗಳ ಮುಖ್ಯಸ್ಥರು.
2) ನಿರ್ದೇಶಕರು, ಗಣಕಯಂತ್ರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-ಇವರಿಗೆ ಉಲ್ಲೇಖ (1)ರಲ್ಲಿ ತಿಳಿಸಿರುವ ಅಧಿಕೃತ ಜ್ಞಾಪನ ಹಾಗೂ ಅನುಬಂಧದ ಪ್ರತಿಯನ್ನು ಲಗತ್ತಿಸಿ ಕಳುಹಿಸುತ್ತಾ, ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
3) ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು.
4) ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು.
5) ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6) ಹಣಕಾಸು ಅಧಿಕಾರಿಯವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7) ನಿರ್ದೇಶಕರು, ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9) ಸರ್ಕಾರಿ ಲೆಕ್ಕ ಪರಿಶೋಧಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
10) ಉಪಕುಲಸಚಿವರು (ಪರೀಕ್ಷಾಂಗ)/ ಸಹಾಯಕ ಕುಲಸಚಿವರು (ಪರೀಕ್ಷಾಂಗ) I & II, ಮಂಗಳೂರು ವಿಶ್ವವಿದ್ಯಾನಿಲಯ.
11) ಕುಲಸಚಿವರು (ಪರೀಕ್ಷಾಂಗ) ಕಛೇರಿಯ ಎಲ್ಲಾ ಅಧೀಕ್ಷಕರು.
12) ಕುಲಸಚಿವರು (ಪರೀಕ್ಷಾಂಗ) ಕಛೇರಿಯ ಆಪ್ತ ಸಹಾಯಕರು.
13) ಇ.1, ಇ.6, ಇ.8, ಇ.9, ಇ.10, ಇ.11 ವಿಷಯ ನಿರ್ವಾಹಕರುಗಳಿಗೆ.
14) ಕಡತಕ್ಕೆ.